724

# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1078
2) ಸದಸ್ಯರ ಹೆಸರು : ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನ ಸಭೆಯಿಂದ ಚುನಾಯಿತರಾದವರು)
3) ಉತ್ತರಿಸುವ ದಿನಾಂಕ : 19.12.2024
4) ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಯಲಹಂಕ ಉಪನಗರದಲ್ಲಿ ಅಕ್ರಮ ಗುಟ್ಕಾ ವ್ಯಾಪಾರ ಮನೆಗಳಲ್ಲಿ ನಡೆಯುತ್ತಿದ್ದು, ತೆರಿಗೆ ವಂಚಿಸಿದ ಕೋಟ್ಯಾಂತರ ಮೌಲ್ಯದ ನೂರಾರು ಅಕ್ರಮ ದಾಸ್ತಾನು ಗೋಡನ್ ತಲೆ ಎತ್ತಿದ್ದರ ಪರಿಣಾಮ ಸರ್ಕಾರಕ್ಕೆ ಬರಬೇಕಾದ ಕೋಟ್ಯಾಂತರ ತೆರಿಗೆ ಸೋರಿಕೆಯಾಗುತ್ತಿರುವ ಕಾರಣ ಮೇಲಾಧಿಕಾರಿಗಳ ಅದೇಶದಂತೆ ದಿನಾಂಕ:04.11.2023ರಂದು ಯಲಹಂಕ ಉಪನಗರದ 2ನೇ ಗುಟ್ಕಾ ಅಕ್ರಮ ವ್ಯಾಪಾರ ಮತ್ತು ಕೋಟ್ಯಾಂತರ ಮೌಲ್ಯದ ಅಕ್ರಮ ದಾಸ್ತಾನಿನ ಎಷ್ಟು ಗೋಡನ್‌ನಿನ ಮೇಲೆ ತೆರಿಗೆ ಅಧಿಕಾರಿಗಳು/ಸಂಬಂಧಪಟ್ಟ ಅಧಿಕಾರಿಗಳು ತಪಾಸಣೆ ಮಾಡಿರುತ್ತಾರೆ. | ದಿನಾಂಕ:04-11-2023 ರಿಂದ ಮತ್ತು ಸದರಿ ಮಾಹೆಯಲ್ಲಿ ಜಾರಿ ವಿಭಾಗದದಿಂದ ಯಲಹಂಕ ಉಪನಗರದ ವ್ಯಾಪ್ತಿಯಲ್ಲಿ ಗುಟ್ಕಾ ವ್ಯಾಪಾರಕ್ಕೆ ಸಂಬಂಧಿಸಿದಂತೆ ಯಾವುದೇ ತಪಾಸಣಾ ಕಾರ್ಯಸೂಚಿಯನ್ನು ಅಧಿಕಾರಿಗಳಿಗೆ ನೀಡಿರುವುದಿಲ್ಲ ಮತ್ತು ಜಾರಿ ವಿಭಾಗದ ಚಲಿಸುವ ದಳದಲ್ಲಿಯೂ ಸಹ ದಿನಾಂಕ:04-11-2023 ರಂದು ಯಾವುದೇ ಗುಟ್ಕಾ ವ್ಯಾಪಾರಕ್ಕೆ ಸಂಬಂಧಿಸಿದಂತೆ ವಾಹನವನ್ನು ಜಪ್ತಿ ಮಾಡಿರುವುದಿಲ್ಲ. |
| ಆ) | ರೇಡ್ ಆಗಿದ್ದರೂ ಅವುಗಳನ್ನು ಜಪ್ತಿ ಮಾಡದೆ ಸೀಲ್ ಮಾಡದೆ ರೇಡ್ ಮಾಡಲು ಹೋದ ಅಧಿಕಾರಿಗಳೇ ಲಂಚ ಪಡೆದಿರುವ ಅಧಿಕಾರಿಗಳನ್ನು ಸರ್ಕಾರ ಪತ್ತೆ ಹೆಚ್ಚುತ್ತದೆಯೇ; ಇಂತಹ ಭ್ರಷ್ಟ ಅಧಿಕಾರಿಗಳನ್ನು ಕಡ್ಡಾಯ ನಿವೃತ್ತಿಗೊಳಿಸುವ ಬಗ್ಗೆ ಹಾಗೂ ಈ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕುವ ಬಗ್ಗೆ ಸರ್ಕಾರದ ಕ್ರಮವೇನು; | ಬೆಂಗಳೂರು, ದಕ್ಷಿಣ ವಲಯ (ಜಾರಿ) ವಿಭಾಗದ ಅಧಿಕಾರಿಗಳಿಂದ ಯಾವುದೇ ತಪಾಸಣೆ ಕೈಗೊಂಡಿರುವುದಿಲ್ಲ.<br><br>ಈ ಹಿನ್ನೆಲೆಯಲ್ಲಿ ಸದರಿ ಪ್ರಶ್ನೆಯು ಉದ್ಭವಿಸುವುದಿಲ್ಲ. |
| ಇ) | ಯಲಹಂಕ ಉಪನಗರದಲ್ಲಿ ಗುಟ್ಕಾ ಪಾನ್ ಮಸಾಲ, ತಂಬಾಕು ಉತ್ಪನ್ನದಿಂದ ತಯಾರಿಸುವ ಎಷ್ಟು ಅನಧಿಕೃತ ವ್ಯಾಪಾರಿಗಳಿದ್ದಾರೆ; ಇದುವರೆವಿಗೆ ಎಷ್ಟು ಅಕ್ರಮ ದಾಸ್ತಾನು ವಶಪಡಿಸಿಕೊಂಡು ದಂಡ ವಿಧಿಸಲಾಗಿದೆ? (ಹೆಸರು, ವಿಳಾಸ ಸಮೇತ ವಿವರ ಒದಗಿಸುವುದು) | ಈ ಸಂಬಂಧ ವಾಣಿಜ್ಯ ತೆರಿಗೆ ಜಾರಿ ವಿಭಾಗದಿಂದ ಯಾವುದೇ ತಪಾಸಣೆ ಮಾಡಿರುವುದಿಲ್ಲ.<br>ಆದ್ದರಿಂದ ಇದರ ಬಗೆ ಯಾವುದೇ ಮಾಹಿತಿಯನ್ನು ಲಭ್ಯವಿರುವುದಿಲ್ಲ. |

ಸಂಖ್ಯೆ: ಆಇ 77 ಸಿಎಸ್‌ಎಲ್ 2024

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ